**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ :03.03.2025**

**ಪಾಟೀ ಸವಾಲು - ಎದುರುದಾರರ ಪರ ವಕೀಲರಿಂದ :**

ವೈದ್ಯಕೀಯ ದಾಖಲೆಗಳಲ್ಲಿ ನಮೂದಿಸಿರುವ ದಿನಾಂಕದ ಪೂರ್ವದಲ್ಲಿ ನನಗೆ ಆರೋಗ್ಯದಲ್ಲಿ ಸಮಸ್ಯೆ ಇತ್ತು. ನನಗೆ ಟಿ.ಬಿ ಖಾಯಿತೆ ಇತ್ತು. ನನಗೆ 2003 ರಿಂದ ಟಿ.ಬಿ ಖಾಯಿಲೆ ಇದೆ. ಆ ಬಗ್ಗೆ ಚಿಕಿತ್ಸೆ ಪಡೆದಿರುವ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ. ದೊಡ್ಡಬಳ್ಳಾಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. 6 ತಿಂಗಳು ಚಿಕಿತ್ಸೆ ಪಡೆದು, ನಂತರ ಹೋಗಿ ಬಂದು ಚಿಕಿತ್ಸೆ ಪಡೆಯುತ್ತಿದ್ದೇನೆ. ಯಾವ ಅವಧಿಯಲ್ಲಿ ಚಿಕಿತ್ಸೆ ಪಡದಿರುತ್ತೇನೆಂದು ನನಗೆ ಹೇಳಲು ಆಗುವುದಿಲ್ಲ. 2003 ರಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಅಸಲು ದಾವ ಸಂಖ್ಯೆ 834/2014 ನ್ನು ದಾಖಲಿಸುವಾಗ ನನಗೆ ಖಾಯಿತೆ ಇರಲಿಲ್ಲ ಅಮೇಲೆ ನನಗೆ ಖಾಯಿಲೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ದಿನಾಂಕ 14.04.2023 ರಂದು ನನಗೆ ಹುಷಾರು ಇರಲಿಲ್ಲ. ಈ ಮೇಲಿನ ವಿಚಾರಗಳನ್ನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುತ್ತೇನೆ. 2021 ಜುಲೈಯಲ್ಲಿ ಕೋವಿಡ್ ಮುಗಿದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆದನಂತರ ನಮ್ಮ ವಕೀಲರಿಂದ ಸದರಿ ಪ್ರಕರಣದ ಬಗ್ಗೆ ತಿಳಿದುಕೊಂಡಿರುವುದಿಲ್ಲ. ದಾವೆ ವಜಾ ಆದ ಎಷ್ಟು ದಿನದ ನಂತರ ಗೊತ್ತಾಯಿತು ಎಂದು ಹೇಳಿರುವುದಿಲ್ಲ. ದಾವ ಆಸ್ತಿ ಕೆ ಐ ಎ ಡಿ ಬಿ ಯಿಂದ ಭೂ ಸ್ವಾದೀನ ಸರಿ. ನನಗಾಗಲೀ ಪ್ರತಿವಾದಿಗಾಗಲೀ ದಾವ ಸ್ವತ್ತಿನ ಮೇಲೆ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ನೀಡಿ ಪರಿಹಾರ ಪಡೆಯಬೇಕೆಂಬ ಉದ್ದೇಶದಿಂದ ಸುಳ್ಳು ದಾವೆ ದಾಖಲಿಸಿರುತ್ತೇನೆಂದರೆ ಸರಿಯಲ್ಲ. ನನಗೆ ಯಾವುದೇ ಟಿ ಬಿ ಖಾಯಿಲೆ ಇರಲಿಲ್ಲ ಹಾಗೂ ಯಾವುದೇ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕೋಸ್ಕರ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿ ಕೊಂಡಿರುತ್ತಾರೆ,

Sd/-

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**

**ದೇವನಹಳ್ಳಿ..**